ಬೆಚ್ಚಗಿಟ್ಟು ತುಂಬ ಹಿಂದೇನೇ ರಕ್ಷಿಸ್ತಿದ್ದೆ...' ಎನ್ನುತ್ತ ಮೆಲ್ಲಗೆ ಪಿಸುಗುಟ್ಟಿ ಶಿಚಿಪ್‌ತ್ಸೋವ್‌ನ ಎದೆಯನ್ನ ಸವರುತ್ತ ಹೇಳಿದ: 'ಕಾಯಿಲೇನ ನಿರ್ಲಕ್ಷಿಸೋದು ಬಹಳ ಸುಲಭ'...

ಹೀಗೆ ಹೇಳಿ ರಿಗೊಲೆಟ್ಟೊ, ಶಿಚಿಪ್‌ತ್ಸೋವ್‌ನ ಎದೆಯ ಮೇಲೆ ತಟ್ಟಿ ತಾನು ತಂದಿದ್ದ ಕಪ್‌ಗಳನ್ನ ಇಟ್ಟು ಅವನ ಎದೆಯನ್ನ ಪೂರಾ ಮುಚ್ಚಿದ.

ಆಮೇಲೆ 'ಎಸ್...' ಅಂತಂದ. ಅಲ್ಲದೆ ತಾನು ಮಾಡಿದ ಚಿಕಿತ್ಸೆಯ ನಂತರ ಪ್ಯಾರಫೆರ್‌ನೇಲಿಯಂ, ಕ್ರಿಂಸನ್ ಜೊತೆ ಶಿಚಿಪ್‌ತ್ಸೋವ್‌ನ ರಕ್ತದ ಸ್ಯಾಂಪಲ್ ತೆಗೆದುಕೊಂಡು ಪ್ಯಾಕ್ ಮಾಡಿಕೊಂಡ.

ಮತ್ತೆ ಹೀಗೆ ಹೇಳಿದ: 'ನೀನು ನನಗೆ ಹೇಳಿ ಕಳುಹಿಸಬಹುದಿತ್ತು... ನಾನು ಬಂದಿರತಿದ್ದೆ... ಪೇಮೆಂಟಿನ ಬಗ್ಗೆ ನೀನು ತಲೆ ಕೆಡಿಸಿಕೊಳ್ಳೋ ಅಗತ್ಯ ಇರಲಿಲ್ಲ. ನಾನು ಕರುಣೆಗೋಸ್ಕರ ಕೆಲಸ ಮಾಡ್ತೇನೆ... ಆ ಮ್ಯಾನೇಜರ್ ಅನ್ನೋ ವಿಗ್ರಹ ನಿನಗೆ ಸಂಬಳ ಕೊಡದ ಮೇಲೆ ನೀನು ದುಡ್ಡನ್ನ ಎಲ್ಲಿಂದ ತರ್ತೀಯಾ? ಈಗ ದಯವಿಟ್ಟು ಈ ಡ್ರಾಪ್ಸ್ ತಗೊ. ತುಂಬ ಒಳ್ಳೆ ಡ್ರಾಪ್ಸ್ ಇವು. ಈಗ ನೀನು ಹರಳೆಣ್ಣೆಯ ಡೋಸ್ ತಗೊಳ್ಳಲೇ ಬೇಕು. ಅದೇ ಸರಿ. ಇದು ನಿನ್ನನ್ನ ಸರಿಮಾಡುತ್ತೆ ಅಂತ ನನಗನಿಸುತ್ತೆ. ಸರಿ ನಾನಿನ್ನ ಹೊರಡ್ತೀನಿ...'

ರಿಗಲೆಟ್ಟೊ ತಾನು ತನ್ನ ಸಂಗಡಿಗನೊಬ್ಬನಿಗೆ ಸಹಾಯ ಮಾಡಿದೆ ಎನ್ನುವ ಸಂಪ್ರೀತ ಭಾವದಲ್ಲಿ ತಾನು ತಂದಿದ್ದ ಪಾರ್ಸಲ್‌ನ ತೆಗೆದುಕೊಂಡು ಹೊರನಡೆದ.

ಮರುದಿನ ಬೆಳಗ್ಗೆ ದುರಂತ ಪಾತ್ರದಾರಿ ನಟ ಸಿಗೇವ್, ಶಿಚಿಪ್‌ತ್ಸೋವ್‌ನನ್ನ ಮತ್ತೆ ಕಾಣಲು ಬಂದ. ಶಿಚಿಪ್‌ತ್ಸೋವ್ ತುಂಬ ದಯನೀಯ ಸ್ಥಿತಿಯಲ್ಲಿರುವುದನ್ನ ನೋಡಿದ. ಶಿಚಿಪ್‌ತ್ಸೋವ್ ಹೊದಿಕೆಯ ಕೆಳಗೆ ಕವುಚಿಕೊಂಡು, ಭಾರವಾಗಿ ಉಸಿರಾಡುತ್ತ ತಾರಸಿಯನ್ನೇ ನೋಡುತ್ತಿದ್ದ. ಜೊತೆಗೆ ಅವನ ಕೈಗಳು ತಾನು ಹೊದ್ದಿದ್ದ ಹೊದಿಕೆಯನ್ನ ಹಿಂಡಿ ಹಿಪ್ಪೆ ಮಾಡುತ್ತಿದ್ದವು.

ಶಿಚಿಪ್‌ತ್ಸೋವ್, ಸಿಗೇವ್‌ನ ಕಂಡ ಕೂಡಲೆ 'ವ್ಯಾಜ್ಮಾಗೆ... ವ್ಯಾಜ್ಮಾಗೆ...' ಅಂದ

'ಏ... ಇದೆ ನೋಡು ನನಗೆ ಆಗಲ್ಲ ಅನ್ನೋದು... ನೋಡು... ಇದಲ್ಲ ವಿಚಾರ... ನನ್ನನ್ನ ಕ್ಷಮಿಸು... ಇದು ನಿಜಕ್ಕೂ ದಡ್ಡತನ...' ಕೈಗಳನ್ನ ಗಾಳಿಯಲ್ಲಿ ಹಾರಾಡಿಸುತ್ತ ಸಿಗೇವ್ ಹೇಳಿದ.

'ವ್ಯಾಜ್ಮಾಗೆ ಹೋಗಲಿಕ್ಕೆ... ಓ ದೇವರೇ....ವ್ಯಾಜ್ಮಾಗೆ...' ಎಂದ ಶಿಚಿಪ್‌ತ್ಸೋವ್.

'ನಾನು... ನಾನು... ಇದನ್ನ ನಿನ್ನಿಂದ ನಿರೀಕ್ಷಿಸಿರಲಿಲ್ಲ. ಹೀಗೆಲ್ಲ ಆಡಿ ಮೂರ್ಛೆ ಬೀಳೊ ಅಗತ್ಯವಾದರೂ ಏನಿದೆ? ಏಯ್... ಏಯ್... ಅದಲ್ಲ ವಿಚಾರ... ಗಡಿಯಾರದ ಗೋಪುರದ ಹಾಗೆ ಉದ್ದಕ್ಕಿದ್ದೀಯ... ಆದರೂ ಅಳ್ತೀಯ... ನಟರು ಇದಕ್ಕೆಲ್ಲ ಅಳ್ತಾರಾ?' ಸಿಗೇವ್ ಕೇಳಿದ.

'ಹೆಂಡತಿಯಿಲ್ಲ... ಮಕ್ಕಳಿಲ್ಲ...' ಅಂತಂದ ಶಿಚಿಪ್‌ತ್ಸೋವ್ ಮತ್ತೆ ಮಣಮಣಿಸುತ್ತ 'ನಾನು ನಟನಾಗಲಿಕ್ಕೆ ಮುಂದಡಿಯಟ್ಟು ನಡೀಬಾರದಿತ್ತು. ವ್ಯಾಜ್ಮಾದಲ್ಲೇ ಉಳಕೋಬೇಕಾಗಿತ್ತು. ನನ್ನ ಜೀವನ ಹಾಳಾಯ್ತು... ಹೋ... ನಾನು ವ್ಯಾಜ್ಮಾದಲ್ಲೇ ಉಳಕೋಬೇಕಿತ್ತು...'

'ಏಯ್....ಅದಲ್ಲ ವಿಚಾರ. ಇದು ದಡ್ಡತನ. ಇದು ತೀರಾ ಕೆಳಮಟ್ಟದ ಆಲೋಚನೆ...' ಅಂದ ಸಿಗೇವ್.

ನಂತರ ಶಿಚಿಪ್‌ತ್ಸೋವ್ ಬಳಿಗೆ ನಡೆದು ಹೇಳಿದ: 'ನಾನೂ ನನ್ನ ಕಾಮ್ರೇಡ್‌ಗಳು ನಿನ್ನನ್ನ ನಮ್ಮ ಖರ್ಚಲ್ಲೇ ಕ್ರಿಮೇಯಿಯಾಗೆ ಕಳಿಸಬೇಕೂಂತಿದ್ದೀವಿ...' ಅಂತ ಸುಳ್ಳೆಸುಳ್ಳೇ ಹೇಳಿದ. ಆದರೆ ಕಾಯಿಲೆ ಮಲಗಿರುವ ಶಿಚಿಪ್‌ತ್ಸೋವ್ ಇದೇನನ್ನೂ ಕೇಳಿಸಿಕೊಳ್ಳದೆ ತನ್ನ ಪಾಡಿಗೆ ತಾನು ' ವ್ಯಾಜ್ಮಾ... ವ್ಯಾಜ್ಮಾ...' ಎಂದು ಮಣಮಣಿಸಿಲಿಕ್ಕೆ ಆರಂಭಿಸಿದ.